# ಸ್ವಾಮಿ ಗಂಭೀರಾನಂದ (೧೮೯೯-೧೯೮೮)

**(ರಾಮಕೃಷ್ಣ ಮಹಾಸಂಘದ ೧೧ನೇ ಪರಮಾಧ್ಯಕ್ಷರು)**

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೨**

ಕಂಪ್ಯೂಟರ್ ಇಲ್ಲದ ದಿನಗಳವು. ಎಲ್ಲವನ್ನೂ ಬರೆಯಬೇಕಾಗಿತ್ತು. ಪುಸ್ತಕವನ್ನೇನೋ ಬರೆದುದ್ದಾಯಿತು. ಗಂಭೀರ ಮಹಾರಾಜರು ಮೂರು ಭಾಗಗಳಿಗೆ ಮೂರು ಹೆಸರುಗಳನ್ನು ನೀಡಿದರು — ಪ್ರಸ್ತುತಿ, ಪ್ರಚಾರ, ಪ್ರಕಲ್ಪ. ನಾನು ಒಪ್ಪಲಿಲ್ಲ. ನಾನೆಂದೆ:

'' 'ಪ್ರಕಲ್ಪ' ಎನ್ನುವುದು ಸರಿಯಾಗುವುದಿಲ್ಲ.''

''ಏಕೆ?''

'''ಪ್ರಕಲ್ಪ' ಎಂದರೆ ಪ್ರಕೃಷ್ಟವಾಗಿ ಕಲ್ಪನೆ ಮಾಡುವುದು. ಸಂಘವೇನು ಸ್ವಾಮೀಜಿಯವರ ಕಲ್ಪನೆಯೆ? 'ಪ್ರವರ್ತನ' ಎಂಬ ಶಬ್ದವು ಚೆನ್ನಾಗಿರುತ್ತದೆಂದು ನನಗೆನಿಸುತ್ತದೆ. 'ಪ್ರಕಲ್ಪ'ದ 'ಪ್ರ' ಅನುಪ್ರಾಸವೂ ಇದರಲ್ಲಿದೆ.''

'' 'ಪ್ರವರ್ತನ' ಎಂದು ಏಕೆ ಬರೆಯಬೇಕು, ಹೇಳು.''

''ಮಹಾರಾಜ್, ಬುದ್ಧದೇವ ನಿರ್ವಾಣಾನಂತರ ಸಾರನಾಥಕ್ಕೆ ಬಂದು 'ಧರ್ಮ ಪ್ರವರ್ತನೆ'ಯನ್ನು ಮಾಡಿದರು. 'ಪ್ರವರ್ತನ' ಎಂಬ ಪದವೇ ಇಲ್ಲಿ ಸರಿಹೊಂದುವುದು. ಸ್ವಾಮೀಜಿಯವರು ರಾಮಕೃಷ್ಣ ಸಂಘದ ಪ್ರವರ್ತಕರು.''

''ಹೌದು. ನೀನು ಸರಿಯಾಗಿಯೇ ಹೇಳಿದೆ. ಹಾಗೇ ಬರೆ.''

ಬೇರೆ ಯಾರಾದರೂ ಆಗಿದ್ದರೆ, ''ಇಲ್ಲ 'ನಾನು ಹೇಳಿದಂತೆಯೆ ಬರೆ' ಎನ್ನುತ್ತಿದ್ದರು. ಗಂಭೀರ ಮಹಾರಾಜರು ವಿಚಾರಕ್ಕೆ ಬೆಲೆಗೊಡುತ್ತಿದ್ದರು.

'Love and freedom are the two conditions for growth' ಎಂದು ಸ್ವಾಮೀಜಿಯವರು ಹೇಳುತ್ತಿದ್ದರು. ಇವೆರಡನ್ನೂ ಗಂಭೀರ ಮಹಾರಾಜರಲ್ಲಿ ಬೇಕಾದಷ್ಟು ಕಂಡಿದ್ದೇನೆ. ಅವರು ಮಠ-ಮಿಷನ್ನಿನ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಇದ್ದಕ್ಕಿದ್ದಂತೆ ಒಂದು ದಿನ ನನ್ನನ್ನು ಕೇಳಿದರು, ''ಏನು ಬೇಕು, ಹೇಳು.'' ನಾನೆಂದೆ ''ನನಗೇನೂ ಬೇಡ.'' ''ಆಶೀರ್ವಾದವೂ ಬೇಡವೆ?'' ''ನೀವು ಸದಾ ನನ್ನ ಮೇಲೆ ಆಶೀರ್ವಾದವನ್ನು ವರ್ಷಿಸುತ್ತೀರಿ, ಆದ್ದರಿಂದ ಅದನ್ನು ಬೇಕೆಂದು ಕೇಳುವ ಆವಶ್ಯಕತೆಯಿಲ್ಲ'' ಎಂದೆ. ಅವರು ನಕ್ಕರು.



ಮತ್ತೊಂದು ದಿನ ಅವರು ಆಫೀಸಿನಲ್ಲಿ ಕುಳಿತು ಪತ್ರವನ್ನು ಓದುತ್ತಿದ್ದರು. ನಾನು ಅವರ ಬಳಿ ಹೋಗುತ್ತಲೆ, ''ಏನು? ನಿನಗೆಷ್ಟು ಸಮಸ್ಯೆಗಳಿವೆ?'' ಎಂದರು. ನಾನೆಂದೆ, ''ಠಾಕೂರರ ಕೃಪೆಯಿಂದ ನನಗೆ ಯಾವ ಸಮಸ್ಯೆಯೂ ಇಲ್ಲ. ಆದರೆ ಆಶ್ರಮದ ಕಾರ್ಯಗಳಿಗೆ ಸಂಬಂಧಪಟ್ಟ ಸಮಸ್ಯೆ ಇದೆ. ನಿಮಗೆಷ್ಟು ಸಮಸ್ಯೆ ಇದೆ?'' ಎಂದು ನಾನು ಮರುಪ್ರಶ್ನಿಸಿದರೆ ಅವರೆಂದರು, ''ಪ್ರತಿನಿತ್ಯವೂ ಅಂಚೆ ತೆರೆದೆನೆಂದರೆ ೨೫-೩೦ ಸಮಸ್ಯೆಗಳನ್ನು ನೋಡುತ್ತೇನೆ. ನೀನೆಷ್ಟು ಸಮಸ್ಯೆಗಳನ್ನು ನೋಡುತ್ತಿಯಾ?'' ನಾನೆಂದೆ, ''ನೀವು ಮಠ-ಮಿಷನ್ನಿನ ಸಮಸ್ಯೆಗಳನ್ನು ಹೇಗೆ ಪರಿಹಾರ ಮಾಡುತ್ತೀರಿ?'' ಅವರೆಂದರು, ''ಠಾಕೂರರೇ ಎಲ್ಲವನ್ನೂ ಪರಿಹಾರ ಮಾಡಿಕೊಡುತ್ತಾರೆ. ನಾವು ನಿಮಿತ್ತ ಮಾತ್ರವಷ್ಟೆ.''

೧೯೬೬ರ ಸಂನ್ಯಾಸ-ಬ್ರಹ್ಮಚರ್ಯ ದೀಕ್ಷೆಯ ಬಳಿಕ ನಾವೆಲ್ಲ ಜನರಲ್ ಸೆಕ್ರೆಟರಿಗಳ ಕೋಣೆಗೆ ಹೋಗಿ, ''ಮಹಾರಾಜ್, ಏನಾದರೂ ಹೇಳಿ'' ಎಂದು ಕೇಳಿಕೊಂಡಾಗ ಅವರೆಂದರು, ''ಹೇಳಲು ಏನೂ ಇಲ್ಲ. ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಬರೆಯುತ್ತಿದ್ದೇನೆ. ಅದರಲ್ಲಿ 'ನವೀನ ಸಂನ್ಯಾಸಿ

ಗಳ ಸಂಘ' ಎಂಬ ಒಂದು ಅಧ್ಯಾಯವಿದೆ. ಈ ಹುಡುಗನಿಗೆ ನನ್ನ ಬರವಣಿಗೆಯ ಪರಿಚಯವಿದೆ. ಇವನು ಓದುತ್ತಾನೆ '' ಎಂದರು. ನಾನಾಗ ಅದನ್ನು ಎಲ್ಲರಿಗೂ ಓದಿ ಹೇಳಿದೆ.

೧೯೬೮ರಲ್ಲಿ ಸ್ವಾಮಿ ಗಂಭೀರಾನಂದಜಿ ಬ್ಯಾರಾಕ್‌ಪುರದಲ್ಲಿ ನಡೆದ 'ಅಖಿಲಭಾರತ ವಿವೇಕಾನಂದ ಯುವ ಮಹಾ ಮಂಡಲ'ದ ವಾರ್ಷಿಕ ಶಿಬಿರದ ಉದ್ಘಾಟನೆ ಮಾಡಲು ಹೋದಾಗ ನಾನೂ ಅವರ ಜೊತೆಯಲ್ಲಿದ್ದೆ. ಸಭೆ ಪ್ರಾರಂಭ ವಾಗುವ ಮುನ್ನ ನನ್ನ ತಂದೆ ಹಾಗೂ ಅಣ್ಣನವರು ಮಹಾರಾಜ ರನ್ನು ತಮ್ಮ ಮನೆಗೆ ಭೇಟಿ ನೀಡಬೇಕೆಂದು ವಿನಂತಿಸಿಕೊಂಡರು. ಅವರಿಗೆ ನನ್ನ ತಂದೆ ಹಾಗೂ ಸೋದರರ ಪರಿಚಯವಿರದಿದ್ದ ಕಾರಣ, ''ನೀವು ಯಾರು? ನಿಮ್ಮ ಮನೆಗೇಕೆ ಬರಬೇಕು?'' ಎಂದು ಕೇಳಿದರು. ನನ್ನ ಹೆಸರು ಹೇಳುತ್ತ 'ಇವರ ತಂದೆ' ಎಂದು ಯಾರೋ ಹೇಳಿದಾಗ ಮಹಾರಾಜ್ ನನ್ನನ್ನು ಕರೆಸಿದರು. ನಾನೂ ''ನಿಮ್ಮ ಪಾದಧೂಳಿಯಿಂದ ನಮ್ಮ ಮನೆ ಪವಿತ್ರವಾಗು ತ್ತದೆ.'' ಎಂದು ವಿನಂತಿಸಿಕೊಂಡೆ. ಅವರು ನನ್ನ ತಂದೆಯವರ ನ್ನುದ್ದೇಶಿಸಿ, ''ಆಗಲಿ, ನಿಮ್ಮಲ್ಲಿಗೆ ಬರಬಹುದು, ಆದರೆ ಒಂದು ಷರತ್ತಿನ ಮೇಲೆ. ನಾನು ನಿಮ್ಮ ಮನೆಯಲ್ಲಿ ಏನನ್ನೂ ತಿನ್ನುವು ದಿಲ್ಲ'' ಎಂದರು. ಕಾರ್ಯಕ್ರಮದ ತರುವಾಯ ನಮ್ಮ ಮನೆಗೆ ಹೋದರು. ನನ್ನ ತಾಯಿ ಪ್ಲೇಟ್ ತುಂಬ ಸಂದೇಶ್, ರಸಗುಲ್ಲಾ ಹಾಗು ಒಂದು ಲೋಟ ನೀರನ್ನು ಕೊಟ್ಟರು. ಗಂಭೀರ ಮಹಾ ರಾಜರು ಹೇಳಿದರು, ''ನಾನು ಏನನ್ನೂ ತಿನ್ನುವುದಿಲ್ಲವೆಂದು ಮೊದಲೇ ಹೇಳಿದ್ದೆನಲ್ಲ!'' ನಾನೆಂದೆ, ''ಮಹಾರಾಜ್, ಇವರು ಗೃಹಸ್ಥರು, ಸಂನ್ಯಾಸಿಗಳು ಗೃಹಸ್ಥರ ಮನೆಗೆ ಹೋದರೆ ಕೊಂಚ ವಾದರೂ ತಿಂದು ಬರಬೇಕು. ಇಲ್ಲದಿದ್ದರೆ ಅವರಿಗೆ ಅಮಂಗಳ ವಾಗುತ್ತದೆ. ಕಡೆಯ ಪಕ್ಷ ನೀರನ್ನಾದರೂ ಕೇಳಿ ಕುಡಿಯ ಬೇಕೆಂದು ಠಾಕೂರರು ಹೇಳಿದ್ದಾರೆ. ನೀವು ಒಂದು ಸಂದೇಶದ ತುಂಡನ್ನಾದರೂ ಬಾಯಿಗೆ ಹಾಕಿಕೊಂಡು ಸ್ವಲ್ಪ ನೀರು ಕುಡಿಯಿರಿ.'' ಅವರು ಹಾಗೆಯೇ ಮಾಡಿದರು.

ನನಗೆ ಸಂನ್ಯಾಸ ದೀಕ್ಷೆಯಾದದ್ದು ೧೯೬೮ರಲ್ಲಿ. ಮಾರ ನೆಯ ವರ್ಷ ನನ್ನನ್ನು ಅಮೆರಿಕಾಗೆ ಕಳುಹಿಸುವುದೆಂದು ನಿಶ್ಚಯವಾಯಿತು. ೧೯೭೦ರ ಡಿಸೆಂಬರ್‌ನಲ್ಲಿ ನಾನು ಮಾಯಾ ವತಿಯಿಂದ ಹೊರಟು ಬಂದೆ. ೧೯೭೧ರಲ್ಲಿ ಸ್ವಾಮೀಜಿಯವರ ಜನ್ಮದಿನದಂದು ಅದ್ವೈತ ಆಶ್ರಮದಿಂದ ಬೇಲೂರು ಮಠಕ್ಕೆ ಬಂದೆ. ಗಂಭೀರ ಮಹಾರಾಜರು ಹಳೆಯ ಮಿಷನ್ ಆಫೀಸಿನ ಮಹಡಿಯ ವರಾಂಡದಲ್ಲಿ ಏಕಾಂಗಿಯಾಗಿ ನಡೆದಾಡು ತ್ತಿದ್ದರು. ನಾನು ಪ್ರಣಾಮ ಮಾಡಿದೊಡನೆಯೆ, ''ಅರೆ, ನೀನು ಹಾಲಿವುಡ್‌ಗೆ ಹೋಗಬೇಕು.'' ಎಂದರು. ನಾನಂದೆ, ''Wrong selection''. ಇನ್ನೂ ಎಷ್ಟೋ ಮಂದಿ ತಿಳಿದ ಹಿರಿಯ ಸಾಧು ಗಳಿದ್ದಾರೆ. ಅವರನ್ನು ಕಳುಹಿಸಿರಿ'' ಎಂದೆ. ಅದಕ್ಕವರು, ''ನಿನಗೆ ಹೋಗಲು ಇಚ್ಛೆಯಿಲ್ಲದಿದ್ದರೆ ಹೇಳು. ನಾನು ಮೀಟಿಂಗ್‌ನಲ್ಲಿ ನಿನ್ನ ಅಭಿಮತವನ್ನು ಮುಂದಿಡುವೆ'' ಎಂದರು. ನಾನೇನೂ ಉತ್ತರಿಸಲಿಲ್ಲ. ಬೇಲೂರು ಮಠದಿಂದ ೨-೩ ಮಂದಿ ಸಾಧು ಗಳ ಹೆಸರನ್ನು ಸ್ವಾಮಿ ಪ್ರಭವಾನಂದಜಿಯವರಿಗೆ ಶಿಫಾರಸು ಮಾಡಲಾಗಿದ್ದು, ಅವರು ಎಲ್ಲರನ್ನೂ ನಿರಾಕರಿಸಿ, ನನ್ನನ್ನೇ ಆಯ್ದುಕೊಂಡಿದ್ದರೆಂದು ನನಗೆ ನಂತರ ತಿಳಿಯಿತು.

೨೭ ಮೇ ೧೯೭೧ರಲ್ಲಿ ಬೇಲೂರು ಮಠದಿಂದ ಗಂಭೀರ ಮಹಾರಾಜ್ ಹಾಗೂ ಸ್ವಾಮಿ ನಿರ್ವಾಣಾನಂದಜಿಯವ ರೊಂದಿಗೆ ನಾನು ಮುಂಬೈಗೆ ಹೋದೆ. ಅಲ್ಲಿಂದ ಅಮೆರಿಕಾಗೆ ಪಯಣ. ಗಂಭೀರಾನಂದಜಿ ಕೇಳಿದರು, ''ಏನಪ್ಪ, ಪಂಚಾಂಗ ವನ್ನು ನೋಡಿದೆಯಾ?'' ನಾನೆಂದೆ, ''ಇಲ್ಲ, ಮಹಾರಾಜ್.'' ''ಪಂಚಾಂಗವನ್ನು ನೋಡದೆ ಪ್ರಯಾಣ ಮಾಡುವೆಯಾ?'' ''ಮಹಾರಾಜ್, ನಾನು ಠಾಕೂರರ ಕಾರ್ಯವನ್ನು ಮಾಡಲು ಹೋಗುತ್ತಿರುವೆ. ಅವರಿಗೇನಾದರೂ ಇಷ್ಟವಾಗದಿದ್ದರೆ ಹಿಂದಿ ರುಗಿ ಬರುವೆ'' ಎಂದೆ.

೩೧ ಮೇ ೧೯೭೧ರಲ್ಲಿ ಮುಂಬೈಯ Gateway of India ದಲ್ಲಿ ಸ್ವಾಮೀಜಿಯವರ ಭವ್ಯ ಕಂಚಿನ ಮೂರ್ತಿಯನ್ನು ಅನಾವರಣ ಮಾಡಲಾಯಿತು. ಸ್ವಾಮಿ ಹಿರಣ್ಮಯಾನಂದಜಿ ಆಗ ಮುಂಬೈ ಕೇಂದ್ರದ ಅಧ್ಯಕ್ಷರಾಗಿದ್ದರು. ೩-೪ ದಿನಗಳ ಆ ಸಮಾರಂಭದಲ್ಲಿ ಬಹುತೇಕ ಟ್ರಸ್ಟಿಗಳೂ ಸೇರಿದಂತೆ ನೂರಕ್ಕೂ ಹೆಚ್ಚು ಸಾಧುಗಳು ಭಾಗವಹಿಸಿದ್ದರು. ಅದರಲ್ಲಿ ನಾನು ಪಾಲ್ಗೊಂಡು, ಜೂನ್ ೧ರಂದು ಮಾಸ್ಕೊ ದಾರಿಯಾಗಿ ಪ್ಯಾರಿಸ್‌ಗೆ ಹೋದೆ. ಅಲ್ಲಿನ ವಿಮಾನ ನಿಲ್ದಾಣದಲ್ಲಿ ಸ್ವಾಮಿ ವಿದ್ಯಾತ್ಮಾನಂದಜಿಯವರ ಭೇಟಿಯಾಗದ ಕಾರಣ ಬಹಳ ತೊಂದರೆಗೆ ಸಿಕ್ಕಿಬಿದ್ದೆ. ಕೊನೆಗೆ ಭಾರತೀಯ ದೂತಾವಾಸದ ಒಬ್ಬ ಸಜ್ಜನರ ಮನೆಯಲ್ಲಿ ಉಳಿದು ಕೊಳ್ಳಬೇಕಾಯಿತು. ನಂತರ ವಿದ್ಯಾತ್ಮಾನಂದಜಿಯವರು ಬಂದು ನನ್ನನ್ನು ಆಶ್ರಮಕ್ಕೆ ಕರೆದುಕೊಂಡು ಹೋದರು. ಅದಾದ ನಂತರ ಲಂಡನ್‌ನಿಂದ ನಾನು ನನಗಾದ ಸಮಸ್ಯೆಯನ್ನು ಕುರಿತು ಸ್ವಾಮಿ ಗಂಭೀರಾನಂದಜಿಯವರಿಗೆ ಪತ್ರವನ್ನು ಬರೆದೆ. ಕೊನೆಗೆ ೧೨.೦೬. ೧೯೭೧ ರಂದು ನಿರ್ವಿಘ್ನವಾಗಿ ಹಾಲಿವುಡ್‌ಗೆ ಬಂದು ಸೇರಿದ ವಿಚಾರವನ್ನು ಹೀಗೆ ಬರೆದೆ : ''ನೀವು ನನ್ನ ಕೈ-ಕಾಲು ಗಳನ್ನು ಕಟ್ಟಿ ಪ್ರಶಾಂತ ಮಹಾಸಾಗರದಲ್ಲಿ ಎಸೆದು ಬಿಟ್ಟಿರುವಿರಿ. ನಾನೇನಾದರೂ ಬದುಕಿ ಉಳಿಯಬೇಕಾದರೆ ಈಜು ಕಲಿಯಲೇ ಬೇಕು. ಬೇರಾವ ಉಪಾಯವೂ ಇಲ್ಲ. ನನ್ನ ಗತಿ ಏನೆಂದು ನಾನರಿಯೆ.'' ಅವರು ೨೪.೬.೧೯೭೧ರಂದು ನೀಡಿದ ಉತ್ತರ ದಲ್ಲಿ ಹೀಗೆ ಬರೆದಿದ್ದರು: ''ನಿನ್ನ ಲಂಡನ್ ಪತ್ರವನ್ನೋದಿ, ವಿದೇಶಕ್ಕೆ ಹೋಗುವ ಮೊದಲ ಹಂತದಲ್ಲಿಯೇ ನಿನಗೆ ಕಷ್ಟ ವಾಯಿತೆಂದು ತಿಳಿದು ದುಃಖವಾಯಿತಾದರೂ ೧೨.೬. ೧೯೭೧ರ ದ್ವಿತೀಯ ಪತ್ರವನ್ನು, ಅದರಲ್ಲೂ ಕಡೆಯ ಸಾಲನ್ನು ಓದಿ ಸಂತೋಷವೇ ಆಯಿತು. 'ನನ್ನ ಗತಿ ಏನೆಂದು ಅರಿಯೆ' — ಈ ನಿನ್ನ ಮಾತಿಗೆ ಉತ್ತರಿಸುತ್ತಿದ್ದೇನೆ. ಎಲ್ಲವೂ ನಿನಗೆ ತಿಳಿದು ಹೋದರೆ, ಭಗವಂತನು ಸ್ವಾಧೀನ, ಸ್ವತಂತ್ರ ಎಂದು ನಾವೇನು

ಹೇಳುತ್ತೇವೆಯೋ ಅದು ಅರ್ಥಹೀನವಾಗುವುದಿಲ್ಲವೆ? ಬಿದ್ದು ಪೆಟ್ಟಾದಾಗ 'ಪ್ರಭು, ನೀನೆಷ್ಟು ಕರುಣಾಮಯ, ನಿನ್ನಿಚ್ಛೆಯಂತಾಗಲಿ' ಎಂದು ಭಾವಿಸುವುದೇ ನಮ್ಮ ತತ್ತ್ವ.'' ೧೯೭೨ರ ಬೇಸಿಗೆಯಲ್ಲಿ ಗಂಭೀರ ಮಹಾರಾಜರು ಕಣ್ಣಿನ ಚಿಕಿತ್ಸೆಗೆಂದು ಬಾಸ್ಟನ್‌ನ ಆಸ್ಪತ್ರೆಯನ್ನು ಸೇರಿದಾಗ ಬ್ರಹ್ಮಚಾರಿ ಧ್ರುವ (ಅಮೆರಿಕನ್) ಮಹಾರಾಜರ ಸೇವೆಗಾಗಿ ನಿಯುಕ್ತರಾದರು. ನಾನು ಮಹಾರಾಜರನ್ನು ನೋಡಲು ಆಸ್ಪತ್ರೆಗೆ ಹೋಗುತ್ತಿದ್ದೆ. ಬೆಳಗ್ಗೆ ಧ್ರುವ 'Gospel of Sri Ramakrishna' ಹಾಗು ಸಂಜೆ 'ಕಠೋಪನಿಷತ್'ನ್ನು ಓದಿ ಹೇಳುತ್ತಿದ್ದರೆ ಗಂಭೀರ ಮಹಾರಾಜರು ಹಾಸಿಗೆಯಲ್ಲಿ ಮಲಗಿ, ಕಣ್ಣು ಮುಚ್ಚಿಕೊಂಡು ಅದರ ವ್ಯಾಖ್ಯಾನ ಮಾಡುತ್ತಿದ್ದರು. ಮೊದಲ ದಿನ ನಾನು ಹೋಗುತ್ತಲೇ ಎದ್ದು ಕುಳಿತು ಧ್ರುವನಿಗೆ ಹೇಳಿದರು : ''ಕನ್ನಡಕವನ್ನು ಕೊಡು! ಇವನು ಎಂತಹ ಸಾಹೇಬನಾಗಿದ್ದಾನೆಂದು ನೋಡುತ್ತೇನೆ'' (ಅಂದರೆ, ಪ್ಯಾಂಟ್, ಕೋಟು, ಟೈ ಧರಿಸಿದವ) ಎಂದರು. ಅಂದು ಮಂಚದ ಮೇಲೆ ಕುಳಿತು ನನ್ನನ್ನು ಆಲಿಂಗಿಸಿ ತುಂಬಾ ಆಶೀರ್ವಾದ ಮಾಡಿದರು. ಮತ್ತೊಂದು ದಿನ ನಾನು ಹೋದಾಗ ಧ್ರುವನು 'ಕಠೋಪನಿಷತ್' ಓದುತ್ತಿದ್ದನು. ಮಧ್ಯದಲ್ಲೇ ನಿಲ್ಲಿಸಿ ನಾನು ಬಂದಿರುವುದನ್ನು ಅವರಿಗೆ ತಿಳಿಸುತ್ತಲೇ ಅವರೆಂದರು, ''ಈ ಶ್ಲೋಕವನ್ನು ಮೊದಲು ಓದು. ನಂತರ ಮಾತನಾಡಿದರಾಯಿತು.'' ಸುದಿನ-ದುರ್ದಿನ, ರೋಗ-ಶೋಕಗಳು ಎನ್ನದೆ ಭಗವಂತ ಹಾಗು ವೇದಾಂತ ಶಾಸ್ತ್ರಗಳನ್ನು ಹಿಡಿದು ಮನಸ್ಸನ್ನು ಊರ್ಧ್ವಮುಖಿಯಾಗಿರಿಸಿಕೊಳ್ಳುವುದು ಹೇಗೆಂಬುದನ್ನು ನಾನು ಅವರಿಂದ ಕಲಿತೆ. ಶಂಕರಾಚಾರ್ಯರ 'ಕೌಪೀನಪಂಚಕದ'ದಲ್ಲಿ ಓದಿದ್ದ 'ವೇದಾಂತವಾಕ್ಯೇಷು ಸದಾ ರಮಂತಃ' ಎಂಬ ಮಾತಿನ ಸತ್ಯವನ್ನು ಮಹಾರಾಜರ ಜೀವನದಲ್ಲಿ ಕಂಡಿದ್ದೇನೆ.

ಬಾಸ್ಟನ್‌ನಿಂದ ಹೊರಟ ಗಂಭೀರಾನಂದಜಿ ಮಹಾರಾಜರು ಅಮೆರಿಕದ ವಿಭಿನ್ನ ಕೇಂದ್ರಗಳನ್ನು ಸುತ್ತಿ ಕಾಳೀಪೂಜೆಯ ಹೊತ್ತಿಗೆ ಹಾಲಿವುಡ್‌ಗೆ ಬಂದರು. ಹಾಲಿವುಡ್, ಸ್ಯಾಂಟಾ ಬಾರ್ಬರಾದಲ್ಲಿ ಭಾಷಣಗಳನ್ನು ಕೊಟ್ಟರು. ನಾನು ಅವರ ಪಕ್ಕದ ಕೋಣೆಯಲ್ಲಿದ್ದೆ. ಒಮ್ಮೆ ರಾತ್ರಿಯ ಭೋಜನದ ಬಳಿಕ ಹೇಳಿದರು. ''ಈ ದೇಶದಲ್ಲಿ ಹೇಗೆ ಭಾಷಣವನ್ನು ಕೊಡಬೇಕೆಂದು ನನಗೆ ಗೊತ್ತಿಲ್ಲ. ಅದಲ್ಲದೆ ಸರಿಯಾಗಿ ಕಣ್ಣು ಕಾಣುವುದೂ ಇಲ್ಲ. ನೀನು ಕೆಲವು points ಹೇಳು, ನಾನು ಕೇಳುತ್ತೇನೆ.'' ನಾನೆಂದೆ, ''ನೀವು ಪಾಂಡಿತ್ಯವುಳ್ಳ ಸಾಧುಗಳು. ನಿಮಗೆಲ್ಲವೂ ತಿಳಿದಿದೆ. ವೇದಾಂತ ಹಾಗೂ ಸ್ವಾಮೀಜಿಯವರ ಭಾವದ ಬಗ್ಗೆ ಮಾತನಾಡಿ.'' ಅವರನ್ನು ಪ್ರಭವಾನಂದಜಿ ಪರಿಚಯ ಮಾಡಿಕೊಟ್ಟಾಗ ಅವರು ಒಂದು ಅದ್ಭುತ ಭಾಷಣವನ್ನು ನೀಡಿದರು.

ಹಾಲಿವುಡ್‌ನಲ್ಲಿ ಒಂದು ರಾತ್ರಿ ಊಟದ ಬಳಿಕ ಲೋಕಾಭಿರಾಮವಾಗಿ ಮಾತನಾಡಿದರು. ಅನಂತರ ಮಠ-ಮಿಷನ್ನಿನ ನಿಯಮ-ಕಾನೂನುಗಳ ಬಗ್ಗೆ ವಿಚಾರಮಾಡುತ್ತಿದ್ದೆವು. ನಾನೆಂದೆ, ''ನನಗೆ ನಿಯಮ-ಕಾನೂನುಗಳು ಅಷ್ಟಾಗಿ ಹಿಡಿಸದು. ನಿಯಮಗಳಿಂದ ಧರ್ಮವನ್ನು ಕಟ್ಟಿದರೆ ಜಡತ್ವ ಉಂಟಾಗುತ್ತದೆ. ಆಗ ಸ್ವಾತಂತ್ರ್ಯ ಕುಂಠಿತವಾಗಿ ಧರ್ಮ ನಷ್ಟವಾಗುತ್ತದೆ. ಮಾನವನ ಹೃದಯವನ್ನು ನಿಯಮಗಳಿಂದ ಬಂಧಿಸಲಾಗುವುದಿಲ್ಲ. ಏಕೆಂದರೆ ಅದು ಯಂತ್ರವಲ್ಲ. ಮಾತ್ರವಲ್ಲ ಒಂದು ದಿನ ರಾಜಾ ಮಹಾರಾಜರನ್ನು ಸಾಧು-ಬ್ರಹ್ಮಚಾರಿಗಳಿಗಾಗಿ ಕೆಲವು ನಿಯಮಗಳನ್ನು ಮಾಡಬೇಕೆಂದು ಕೃಷ್ಣಲಾಲ್ ಮಹಾರಾಜರು (ಸ್ವಾಮಿ ಧೀರಾನಂದ) ಹೇಳಿದಾಗ, ಉತ್ತರವಾಗಿ ಅವರು, 'ನಿಯಮಾವಳಿಗಳನ್ನು ಸ್ವಾಮೀಜಿ ಈಗಾಗಲೇ ತಯಾರು ಮಾಡಿಟ್ಟು ಹೋಗಿದ್ದಾರೆ. ನೋಡು ಕೃಷ್ಣಲಾಲ್, ನಿಯಮ-ಕಾನೂನುಗಳನ್ನು ಹೆಚ್ಚಿಸದೆ ಪ್ರೀತಿಯನ್ನು ಸ್ವಲ್ಪ ಹೆಚ್ಚಿಸು,' ಎಂದು ಹೇಳಿದ್ದನ್ನು ನಾನು ಪ್ರಭವಾನಂದರಿಂದ ಕೇಳಿದ್ದೇನೆ.''

ಇದನ್ನು ಕೇಳಿದ ಗಂಭೀರ ಮಹಾರಾಜರು ಹೇಳಿದರು, ''ನೋಡು, ನಿಯಮಗಳ ಹೊರತು ಯಾವ ಸಂಘವೂ ಕೆಲಸ ಮಾಡುವುದಿಲ್ಲ. ನಿಯಮಗಳನ್ನು ಪಾಲಿಸುತ್ತ ನಿಯಮಗಳನ್ನು ದಾಟಬೇಕೆಂದು ಸ್ವಾಮೀಜಿ ಹೇಳಿದ್ದಾರೆ.'' ಮತ್ತೆ ನಗುತ್ತ, ''ಒಂದು ಕಥೆ ಹೇಳುತ್ತೇನೆ ಕೇಳು: ಒಂದು ದಿನ ತುಂಬ ಮಳೆ ಬರುತ್ತಿತ್ತು. ಕಾಬೂಲಿವಾಲನೊಬ್ಬ ಶಿವಮಂದಿರದೊಳಗ್ಗೆ ಹೊಕ್ಕು ಶಿವನ ತಲೆಯ ಮೇಲೆ ತನ್ನ ಚಪ್ಪಲಿ ಹಾಕಿ, ಎರಡೂ ಕಾಲುಗಳನ್ನಿರಿಸಿ ನಿದ್ರೆ ಹೋದ. ಅದೇ ವೇಳೆಗೆ ಬ್ರಾಹ್ಮಣನೊಬ್ಬ ಮಳೆಯಿಂದ ಪಾರಾಗಲು ಮಂದಿರದೊಳಕ್ಕೆ ಹೋದ. ಅಕಸ್ಮಾತ್ತಾಗಿ ಅವನ ಕಾಲು ಶಿವನ ವಿಗ್ರಹಕ್ಕೆ ತಾಗಿದಾಗ, ಆತನು ಕೂಡಲೆ ಶಿವನ ಕ್ಷಮೆಯನ್ನು ಬೇಡಿದ. ಆದರೆ ಶಿವನು ಅವನ ಮುಂದೆ ಬಂದು ನಿಂತು ತನ್ನ ತ್ರಿಶೂಲದಿಂದ ಬ್ರಾಹ್ಮಣನ್ನು ತಿವಿಯಲು ಮುಂದಾದನು. ಬ್ರಾಹ್ಮಣನು ಕಾತರನಾಗಿ 'ಪ್ರಭು, ನಿನ್ನ ವಿಚಾರವೇನೆಂದು ತಿಳಿಯುತ್ತಿಲ್ಲ. ಅಕಸ್ಮಾತ್ತಾಗಿ ನನ್ನ ಕಾಲು ನಿನಗೆ ತಗುಲಿತು. ಅದಕ್ಕೆ ನಾನು ಕ್ಷಮಾಯಾಚನೆಯನ್ನು ಮಾಡಿ ನಿನಗೆ ನಮಸ್ಕರಿಸಿದೆ. ಆದರೆ ಈ ಚರ್ಮದ ವಾಸನೆಯ ಕಾಬೂಲಿವಾಲ ನಿನ್ನ ತಲೆಯ ಮೇಲೆ ಬೂಟುಕಾಲನ್ನಿರಿಸಿ ಮಲಗಿದ್ದಾನೆ. ನೀನು ಅವನನ್ನೇಕೆ ಶಿಕ್ಷಿಸುತ್ತಿಲ್ಲ?' ಶಿವ ಹೇಳಿದ, 'ನೋಡು, ಕಾಬೂಲಿವಾಲನಿಗೆ ನನ್ನ ಪರಿಚಯವೂ ಇಲ್ಲ, ನನ್ನ ಮೇಲೆ ವಿಶ್ವಾಸವೂ ಇಲ್ಲ. ಆದ್ದರಿಂದ ಇವನ ಮೇಲೆ ಯಾವ ಕ್ರಮವನ್ನೂ ಕೂಡ ತೆಗೆದುಕೊಳ್ಳಲಾರೆ. ಆದರೆ ನಿನಗೆ ನನ್ನ ಮಹತ್ವ ತಿಳಿದಿದೆ. ಹಾಗೂ ನನ್ನ ಮೇಲೆ ನಿನಗೆ ನಂಬಿಕೆಯೂ ಇದೆ. ಆದ್ದರಿಂದ ನಿನಗೆ ನಾನು ಶಾಸ್ತಿ ಮಾಡಬಲ್ಲೆ.' ಠಾಕೂರರ ಸಂಘದ ಶ್ರೇಷ್ಠತೆ ಹಾಗೂ ಮಹತ್ವವನ್ನು ತಿಳಿದು ಠಾಕೂರರ ಆದರ್ಶವನ್ನು ಅನುಸರಿಸುವವರಿಗೆ ಸರಿಯಾದ ಪಥದಲ್ಲಿ ನಡೆಯುವುದಕ್ಕಾಗಿ ನಿಯಮಗಳ ಅಗತ್ಯವಿದೆ. ಅಹಂಕಾರಿ ಸಾಧುಗಳು, ನಿಯಮಗಳನ್ನು ಪಾಲಿಸಲಿಚ್ಛಿಸದಿರುವವರು ಈ ಚರ್ಮ ವಾಸನೆಯುಳ್ಳ ಕಾಬೂಲಿವಾಲನಂತೆ'' ಎಂದು ವಿವರಿಸುತ್ತ ಒಬ್ಬಿಬ್ಬರು ಸಾಧುಗಳನ್ನು ಉಲ್ಲೇಖಿಸಿದರು.

೧೯೭೭ರಲ್ಲಿ ಹಾಲಿವುಡ್‌ನಿಂದ ಮೊದಲ ಬಾರಿ ಬೇಲೂರು ಮಠಕ್ಕೆ ಬಂದಾಗ ಗಂಭೀರ ಮಹಾರಾಜರು ಜನರಲ್ ಸೆಕ್ರೆಟರಿಗಳಾಗಿದ್ದರು. ಸಾಯಂಕಾಲ ಅವರೊಡನೆ ಸುತ್ತಾಡುತ್ತಿದ್ದೆ. ಮಹಾರಾಜರೊಂದಿಗೆ ನಾನು ತುಂಬ free ಆಗಿದ್ದೆ. ಒಂದು ದಿನ ನಾನೆಂದೆ, ''ಮಹಾರಾಜ್, ಪಾಶ್ಚಾತ್ಯದಲ್ಲಿ ನಮಗೆ ಮೂರು 'ಪ-ಯುಕ್ತ' ಸಾಧುಗಳು ಬೇಕಾಗಿದ್ದಾರೆ.'' ''ಹೇಗೆ?'' ಎಂದು ಅವರು ಕೇಳಿ ದಾಗ ನಾನೆಂದೆ, ''ಪವಿತ್ರ, ಪ್ರೇಮಯುಕ್ತ ಹಾಗು ಪಂಡಿತ.'' ಸ್ವಾಮಿ ಆತ್ಮಸ್ಥಾನಂದರು ನನಗೆ ತಮಾಷೆಯಿಂದ ಹೇಳಿದರು, ''ನೀನು 'ಸಾಧುನಿವಾಸ' ಸುತ್ತಿಕೊಂಡು ಬಂದು ನೋಡು, ಅದೆಷ್ಟು ಮಂದಿ ಸಿಗುತ್ತಾರೆಂದು.''

ಸೆಪ್ಟೆಂಬರ್ ತಿಂಗಳಲ್ಲಿ ಗಂಭೀರ ಮಹಾರಾಜರೊಡನೆ ಸುತ್ತಾಡುತ್ತಿದ್ದಾಗ ಮಾತಿನ ನಡುವೆ ನಾನೆಂದೆ, ''ಮಹಾರಾಜ್, ಸ್ವಾಮೀಜಿ ಹೇಳುತ್ತಾರೆ, 'ದೊಡ್ಡ ಮರದ ನೆರಳಿನಲ್ಲಿ ಚಿಕ್ಕ ಗಿಡಗಳು ಬೆಳೆಯಲಾರವು. ಚಿಕ್ಕವರು ಬರುವಂತೆ ನಾನಿಲ್ಲಿಂದ ಹೋಗ ಬೇಕು''. ಅದಕ್ಕವರೆಂದರು ''ನೋಡು ಸ್ವಾಮೀಜಿ ಮಹಾಪುರು ಷರು. ಅವರೇ ನಮ್ಮ ಆದರ್ಶ.'' ಮಾರನೆಯ ದಿನ ಗಂಗೇಶಾ ನಂದಜಿಯವರಿಂದ ತಿಳಿಯಿತು, ಗಂಭೀರ ಮಹಾರಾಜರು ಜನರಲ್ ಸೆಕ್ರೆಟರಿ ಸ್ಥಾನದಿಂದ ನಿವೃತ್ತಿ ಪಡೆದಿದ್ದರೆಂದು. ಕಣ್ಣಿನ ದೃಷ್ಟಿ ಚೆನ್ನಾಗಿರಲಿಲ್ಲವಾದ್ದರಿಂದ ಆ ಪ್ರಧಾನನ ಸ್ಥಾನದಲ್ಲಿ ಮುಂದುವರಿಯಲು ಅವರು ಇಷ್ಟಪಡಲಿಲ್ಲ. ಕಾಂಕುರಗಾಛಿಯ ಸ್ವಾಮಿ ಭೂತೇಶಾನಂದರು ಹಾಗೂ ಇತರ ಹಿರಿಯ ಟ್ರಸ್ಟಿಗಳ ಕೋರಿಕೆಯ ಮೇರೆಗೆ ತಮ್ಮ ಅವಧಿ ಮುಗಿಯುವ ತನಕ ತಮ್ಮ ಕಾರ್ಯವನ್ನು ನಿಭಾಯಿಸಿದರು. ೧೯೭೭ರ ಕೊನೆಯಲ್ಲಿ ಮೂರು ತಿಂಗಳ ರಜೆ ತೆಗೆದುಕೊಂಡು ಅವರು ಲಕ್ನೋಗೆ ಹೋದಾಗ ಸ್ವಾಮಿ ವಂದನಾನಂದಜಿಯವರು ಈ ಕಾರ್ಯ ವನ್ನು ನಿರ್ವಹಿಸಿದರು. ಅನಂತರ ಅವರು ಉಪಾಧ್ಯಕ್ಷರೂ ಆದರು.

೧೯೮೨ರಲ್ಲಿ ಸೆಂಟ್ ಲೂಯಿಸ್‌ನಿಂದ ಬೇಲೂರು ಮಠಕ್ಕೆ ಹೋದಾಗ ಅವರು ಮಂದಿರದ ಹಿಂಬದಿಯಿರುವ ಕಟ್ಟಡದಲ್ಲಿದ್ದರು. ಒಂದು ದಿನ ನಾನೆಂದೆ, ''ಮಹಾರಾಜ್, ನಿಮ್ಮ 'ಶ್ರೀರಾಮಕೃಷ್ಣ ಭಕ್ತ ಮಾಲಿಕೆ'ಯ ಎರಡು ಸಂಪುಟಗಳ ಪರಿಷ್ಕರಣವಾಗಬೇಕು, ಏಕೆಂದರೆ ಈಗ ಇನ್ನೂ ಅನೇಕ ಹೊಸ ಮಾಹಿತಿಗಳು ದೊರಕಿವೆ.'' ಅವರೆಂದರು ''ಯಾರು ಮಾಡುತ್ತಾರೆ? ನನಗೀಗ ಕಣ್ಣು ಸರಿಯಾಗಿ ಕಾಣದು.'' ಆದರೂ ಅವರು ಸಾಹಿತ್ಯಿಕ ಕೆಲಸಗಳನ್ನು ಮುಂದುವರಿಸಿದರು. ಪ್ರತಿದಿನವೂ ಸೇವಕರ ಸಹಾಯದಿಂದ 'ಯುಗನಾಯಕ ವಿವೇಕಾನಂದ' ಗ್ರಂಥದ ಪರಿಷ್ಕರಣವನ್ನೂ, ಗೀತೆ ಹಾಗು ಛಾಂದೋಗ್ಯ ಉಪನಿಷತ್ತಿನ ಶಾಂಕರ ಭಾಷ್ಯವನ್ನು ಇಂಗ್ಲಿಷಿಗೆ ಅನುವಾದಿಸಿದರು. ಹಿಂದೆ ಅದ್ವೈತ ಆಶ್ರಮದಲ್ಲಿ ಮಹಾರಾಜರ 'Eight Upanishads'ನ ಪ್ರೆಸ್ ಪ್ರತಿಯನ್ನು ನೋಡಿದ್ದ ಹಾಗೂ ಅಲ್ಲಿ ಕರಡು ತಿದ್ದುಪಡಿ ಮಾಡುತ್ತಿದ್ದ ತ್ರಿಚೂರಿನ ಸ್ವಾಮಿ ಗಭೀರಾನಂದಜಿಯವರಿಗೆ ಗೀತೆಯ ಹಸ್ತಪ್ರತಿಯನ್ನು ಕಳುಹಿಸಲು ಸಲಹೆ ನೀಡಿದಾಗ ಅವರು ಅದಕ್ಕೊಪ್ಪಿದರು.

ಈ ದೇಶದ (ಅಮೆರಿಕದ) ಭಕ್ತರು ಕ್ರಿಸ್‌ಮಸ್ ಸಮಯದಲ್ಲಿ ಸಾಧುಗಳಿಗೆ ಅಂಗಿ, ಸ್ವೆಟರ್, ಹಣ ಮುಂತಾದ ಉಡುಗೊರೆಗಳನ್ನು ಕೊಡುತ್ತಾರೆ. ಈ ಹಣದಿಂದ ಸ್ವಲ್ಪವನ್ನು ಗಂಭೀರ ಮಹಾರಾಜರ ವೈಯಕ್ತಿಕ ಖರ್ಚಿಗೆಂದು ಕಳುಹಿಸುತ್ತಿದ್ದರೆ ಅವರೊಮ್ಮೆ ''ನನಗೆ ವಿಶೇಷವಾಗಿ ಏನೂ ಬೇಕಾಗುವುದಿಲ್ಲ, ನೀನು ನಿನ್ನ ವಿಧವೆ ತಾಯಿಗೆ ಸ್ವಲ್ಪ ಹಣವನ್ನು ಕಳುಹಿಸು, '' ಎಂದು ಬರೆದರು. ''ನಾನು ಕಳುಹಿಸುವ ಹಣವನ್ನು ನಿಮ್ಮ ಅಡಿಗೆಯವನ ಸಂಬಳಕ್ಕಾಗಿಯಾದರೂ ಉಪಯೋಗಿಸಿ'' ಎಂದು ಬರೆದೆ. ಮಠದ ಹಣವನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಖರ್ಚು ಮಾಡಲು ಅವರು ಇಷ್ಟಪಡುತ್ತಿರಲಿಲ್ಲ. ತಮ್ಮ ಖರ್ಚನ್ನು ತಾವೇ ವಹಿಸಿಕೊಳ್ಳುತ್ತಿದ್ದರು, ಯಾರ ಮುಂದೂ ಕೈಚಾಚುತ್ತಿರಲಿಲ್ಲ. ಗಂಭೀರ ಮಹಾರಾಜರು ತಮ್ಮ ದೇಹ-ಮನ- ಪ್ರಾಣಗಳನ್ನು ಅಂದರೆ ಸರ್ವಸ್ವವನ್ನೂ ರಾಮಕೃಷ್ಣ ಸಂಘಕ್ಕೋಸ್ಕರ ತ್ಯಾಗ ಮಾಡಿದ್ದರು.

ಅವರು ಪ್ರೆಸಿಡೆಂಟ್ ಆದ ಬಳಿಕ ತಮಗೆ ಹಣ ಕಳುಹಿಸುವುದು ಬೇಡವೆಂದು ನನಗೆ ಬರೆದರು. ಭಕ್ತರು ಕೊಟ್ಟ ಹಣದಿಂದಲೇ ನಿರ್ವಹಿಸುತ್ತಿದ್ದರು. ೧೯೮೬ರಲ್ಲಿ ಬೇಲೂರು ಮಠಕ್ಕೆ ಹೋದಾಗ ಅವರು ಹೇಳಿದರು, ''ನೋಡು, ಇದು ಬೇಲೂರು ಮಠ. ಇಲ್ಲಿ ಯಾವುದಕ್ಕೂ ಕೊರತೆಯಿಲ್ಲ. ನಿನಗೆ ಯಾವಾಗ ಏನು ಬೇಕೋ ಕೇಳು; ಅಲ್ಲದೆ, ಧೋತಿ, ಚಾದರ ಹಾಗೂ ಅಂಗಿಗೆ ಬೇಕಾಗುವ ಬಟ್ಟೆಯನ್ನು ಖರೀದಿಸಬೇಡ. ದೀಕ್ಷೆಯ ಸಮಯದಲ್ಲಿ ಇವು ನನಗೆ ಬೇಕಾದಷ್ಟು ಸಿಗುತ್ತವೆ. ಅವುಗಳನ್ನು ನೀನು ಇಲ್ಲಿಂದ ಪಡೆಯಬಹುದು. ಹಾಗೂ, ರೇಷ್ಮೆಯ ಬಟ್ಟೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗು. ಈ ದೇಶದಲ್ಲಿ ಸಾಧುಗಳು ರೇಷ್ಮೆಯನ್ನುಟ್ಟರೆ ಜನರ ನಿಂದೆ, ಟೀಕೆಗಳಿಗೆ ಗುರಿಯಾಗಬೇಕಾಗುತ್ತದೆ. ಆದರೆ ಆ ದೇಶದ ಜನರು ಇದನ್ನು ಲೆಕ್ಕಿಸುವುದಿಲ್ಲ.'' ಅನಂತರ, ಠಾಕೂರರ ಹಣವನ್ನು ನಾನು ವ್ಯರ್ಥವಾಗಿ ಖರ್ಚು ಮಾಡದಂತೆ, ನನಗೆ ಬೇಕಾದುದೆಲ್ಲ ಕೊಡಲು ತಮ್ಮ ಸೇವಕರಿಗೆ ನಿರ್ದೇಶಿಸಿದರು.

ಅಮೆರಿಕಾಗೆ ಬಂದ ಮೇಲೆ ಅನೇಕ ಬಾರಿ ಭಾರತಕ್ಕೆ ತೆರಳಿದ್ದೇನೆ. ಅವರು ನನ್ನೊಡನೆ ದೀರ್ಘ ಸಮಯ ಆಧ್ಯಾತ್ಮಿಕ, ಹಿರಿಯ ಸಾಧುಗಳ ಸ್ಮೃತಿ — ಹೀಗೆ ನಾನಾ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದರು. ಅದಲ್ಲದೆ ಪತ್ರದ ಮೂಲಕವೂ ಅನೇಕ ವಿಷಯಗಳ ಬಗ್ಗೆ ಉತರಿಸುತ್ತಿದ್ದರು. ವ್ಯಕ್ತಿ ನಮ್ಮನ್ನು ಅಗಲಿದರೂ, ಅವರ ಸ್ಮೃತಿ ಉಳಿಯುತ್ತವೆ. ಪೂಜ್ಯ ಗಂಭೀರಾನಂದರ ನೆನಪುಗಳು ನನಗೆ ಪ್ರೇರಣಾದಾಯಕವೂ ಮಧುರವೂ